**ಓ.ಎಸ್. 137/2024** **ಪಿ.ಡಬ್ಲೂಃ 1**

**ಸಾಕ್ಷಿಯನ್ನು ದಿಃ 24.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಂ.ಆರ್.ಹೆಚ್ ವಕೀಲರಿಂದ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ, ಸತ್ಯವಾಗಿದೆ ಮತ್ತು ಸಹಿ ನನ್ನದೆ ಆಗಿದೆ.

**ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.**

ದಿಃ16.12.2022 ಮತ್ತು ದಿಃ 29.12.2022 ರಂದು ಪ್ರತಿವಾದಿಯ ಗಂಡ ಶ್ರೀಧರ್ ರವರು ಬರೆದುಕೊಟ್ಟ ಕ್ರಯ ಕರಾರು ಪತ್ರ, ವಾದಿ ಮತ್ತು ಪ್ರತಿವಾದಿಯ ಗಂಡ ಶ್ರೀಧರ್ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ರಿಜ್ವಾನ್ ಅಲಿಯಾಸ್ ಬಾಬು, ಶಫೀ, ಶೈಫುಲ್ಲಾ ರವರು ಸಾಕ್ಷಿದಾರರಾಗಿ ಸಹಿ ಮಾಡಿರುವುದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳನ್ನು ರಾಜಶೇಖ ಮೂರ್ತಿ ಎಂಬುವವರು ಬರೆದಿರುತ್ತಾರೆ. ಆದರೆ ದಾಖಲೆ ನಮಗೆ ಆದ ಕಾರಣ ಕೇಳುವಿಕೆಗಾಗಿ ಇರಿಸಲಾಗಿದೆ.

| | |
|---|---|
| ನಿಪಿ.1 | ದಿಃ 20.05.2024 ರಂದು ಪ್ರತಿವಾದಿಯವರಿಗೆ ನೀಡಿದ ನೊಟೀಸಿನ ಕಛೇರಿ ಪ್ರತಿ |
| ನಿಪಿ.2 ರಿಂದ 4 | 3 ಅಂಚೆ ರಶೀದಿಗಳು |
| ನಿಪಿ.5 ರಿಂದ 7<br>ನಿಪಿ.5(ಎ)ಯಿಂದ 7(ಎ) | ಪ್ರತಿವಾದಿಯವರೆ ನೀಡಿದ ನೊಟೀಸು ಜಾರಿಯಾಗದೆ ವಾಪಸ್ಸು ಬಂದ 3 ಅಂಚೆ ಲಕೋಟೆಗಳು ಮತ್ತು ಅದರೊಳಗಿನ ಪ್ರತಿಗಳು |

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.